# ಕಲಿಸು ಗುರುವೆ ಕಲಿಸು

ಕಲಿಸು ಗುರುವೆ ಕಲಿಸು
ಕಲಿಸು ಗುರುವೆ ಕಲಿಸು

ಸುಳ್ಳಿನಾ ನಡುವೆ ನಾ ಸತ್ಯವನಾಡಲು ಕಲಿಸು
ಸ್ವಾರ್ಥದಾ ನಡುವೆ ನಿಸ್ವಾರ್ಥಿಯಾಗಲು ಕಲಿಸು
ಅಂಜಿ ನಡೆಯುವವರ ನಡುವೆ ಧೀರನಾಗಲು ಕಲಿಸು
ಧರೆಯ ದುಷ್ಟರ ನಡುವೆ ಜಾಣನಾಗಲು ಕಲಿಸು
ಜಾ... ಣನಾಗಲು ಕಲಿಸು
ನಾ... ಜಾ... ಣನಾಗಲು ಕಲಿಸು

ಬೆವರಿಳಿಸಿ ಗಳಿಸಿದ ಒಂದು ಕಾಸು
ಸಿಕ್ಕ ಹತ್ತಕ್ಕಿಂತ ಮಿಗಿಲೆಂಬುದು ಕಲಿಸು
ಸೋಲು ಗೆಲುವಿನಲಿ ಸಮಚಿತ್ತದಿಂದಿರಲು
ಶತ್ರುಗಳಿಗೆ ಸನ್ಮಿತ್ರನಾಗಿರಲು ಕಲಿಸು
ಹಸಿರು ಮಲೆ ಹೂವಲಿ ನಾ ಧ್ಯಾನಿಸುವುದ ಕಲಿಸು
ಜಾ... ಣನಾಗಲು ಕಲಿಸು
ನಾ... ಜಾ... ಣನಾಗಲು ಕಲಿಸು

ಜಗವೆಲ್ಲಾ ಒಂದಾಗಿ ಜರಿದರು ಸರಿಯೇ
ನನ್ನನೇ ನಾ ನಂಬುವ ಬಗೆ ಕಲಿಸು
ಅಳುವಿನಲಿ ಅವಮಾನ ಇಲ್ಲೆಂಬುದ ನೀ ಕಲಿಸು
ನನ್ನನೇ ನಾ ನೋಡಿ ನಗುವುದನು ಕಲಿಸು
ನನ್ನನೇ ನಾ ನೋಡಿ ಅಳುವುದನು ಕಲಿಸು
ಮಾನವೀಯತೆಯಲಿ ನಾ ಮೆರೆಯುವುದನು ಕಲಿಸು
ಮಾನವೀಯತೆಯಲಿ ನಾ ಕರಗುವುದನು ಕಲಿಸು
ಜಾ... ಣನಾಗಲು ಕಲಿಸು
ನಾ...ಜಾ... ಣನಾಗಲು ಕಲಿಸು

**-ಎಸ್. ರಾಮನಾಥ**

ಕಲೆ: ದರ್ಶನ್ ವಿ.

